ಬುಡದಲ್ಲಿ ವೃತ್ತಾಕಾರವಾಗಿ ಜೋಡಿಸಿಟ್ಟಿತ್ತು. ಮೊಟ್ಟೆ ಇಡುವ ಸಮಯ ಬಂದರೂ ಇದ್ಯಾಕೆ ಕಳ್ಳಾಟವಾಡುತ್ತಿದೆ ಎಂದು ಅದರ ಬೆನ್ನು ಹತ್ತಿದಾಗ ಅದು ಕದ್ದು ತತ್ತಿಯಿಟ್ಟ ರಹಸ್ಯ ಬಯಲಾಯಿತು. ಸದ್ಯ ಹಾವಿಗೆ ಈ ವಿಷಯ ತಿಳಿಯದ ಕಾರಣ ಎಲ್ಲಾ ತತ್ತಿಗಳೂ ಬಚಾವಾಗಿದ್ದವು. ನಾಗನಿಗೆ ಕೊಂಚ ಸುಳಿವು ಸಿಕ್ಕಿದ್ದರೂ ಅದು ಪಕ್ಕಾ ಮುಂಡಾಮೋಚಿರುತ್ತಿತ್ತು.

ಇಂಥ ವಿಷಯ ಪತ್ತೆ ಹಚ್ಚುವುದರಲ್ಲಿ ಉರಗಗಳು ಎತ್ತಿದ ಕೈ. ಎಷ್ಟೋ ಸಲ ತತ್ತಿ ಹುಡುಕಿಕೊಂಡು ಮನೆಯ ತನಕ ಬಂದ ಪ್ರಸಂಗಗಳೂ ನಡೆದು ಹೋದವು. "ಹಾವು ಬರೀ ವಾಸ್ನೇಲೆ ಕೋಳಿ ಇರೋ ಜಾಗ ಪತ್ತೆ ಹಚ್ಚುತ್ತೆ. ಮೈಲುಗಟ್ಲೆ ದೂರ ಇದ್ರೂ ಗಾಳಿ ವಾಸ್ನೆ ಜಾಡು ಹಿಡ್ಕೊಂಡು ಮೊಟ್ಟೆ ಸಿಕ್ರೆ ಮೊಟ್ಟೆ, ಕೋಳಿ ಸಿಕ್ರೆ ಕೋಳಿ ಎರಡನ್ನೂ ತಿಂದು ಹಾಕುತ್ತೆ. ನಾಗರ ಮುಟ್ಟಿದ ತತ್ತಿ ತಿಂದವರು ಇಲ್ಲೀಗಂಟ ಯಾರೂ ಉಳಿದಿಲ್ಲ" ಎಂದು ಭಜನೆ ಕಿಟ್ಟಜ್ಜ ನಮಗೆ ಹೇಳುತ್ತಿದ್ದ.

ಪ್ರತಿ ಶುಕ್ರವಾರ ಸಂಜೆ ಮ್ಯಾನೇಜರ್ ಕಚೇರಿಯಲ್ಲಿ ನಡೆಯುವ ಪೂಜೆಯಲ್ಲಿ ಕಿಟ್ಟಜ್ಜ ಭಜನೆ ಹೇಳುತ್ತಿದ್ದ. ಈ ಕಾರಣಕ್ಕೆ ಅವನಿಗೆ ಭಜನೆ ಕಿಟ್ಟಜ್ಜ ಅಂತ ಹೆಸರು ಬಂದಿತ್ತು. ಎಲ್ಲರೂ ಕರೆದಂತೆ ನಾವೂ ಹಾಗೆ ಕರೀತಿದ್ದೆವು. ಭಜನೆಗೆ ತಾಳ ಹಾಕಲು ಆತ ನನ್ನ ಕರೆದ್ಕೊಯ್ಯುತ್ತಿದ್ದ. ಮಂಡಕ್ಕಿ, ಬೆಲ್ಲ, ತೆಂಗಿನ ಕಾಯಿಯ ಪ್ರಸಾದದ ಆಸೆಗೆ ನಾನು ತಪ್ಪದೆ ಹೋಗುತ್ತಿದ್ದೆ. ಅವನ ಜೊತೆ ಸೇರಿ ನಾನೂ ಪೂಜೆಯ ಅರ್ಧ ಕೆಲಸ ಮಾಡುತ್ತಿದ್ದೆ. ಬಾಳೆಹಣ್ಣು, ಜೇನುತುಪ್ಪ, ಹಸಿಕೊಬ್ಬರಿ ತುರಿಗೆ ಬೆಲ್ಲ ಹಾಕಿ ಕಲೆಸಿದ ರಸಾಯನವಂತೂ ಮರೆಯಲು ಸಾಧ್ಯವೇ ಇಲ್ಲ. ಅದನ್ನೆಲ್ಲಾ ಭಜನೆ ಕಿಟ್ಟಜ್ಜನೇ ತಯಾರಿಸಿ ಪೂಜೆ ಸಲ್ಲಿಸುತ್ತಿದ್ದ. ನಾನು ಅವನ ಸಹಾಯಕನಾಗಿ ಎಲ್ಲಾ ಕಲಿತಿದ್ದೆ. ಆತ ಏಕತಾರಿ ಹಿಡಿದರೆ ಸುಶ್ರಾವ್ಯವಾಗಿ ಹಾಡುತ್ತಿದ್ದ. ರಾತ್ರಿ ಕತ್ತಲಲ್ಲಿ ರಮ್ಯವಾದ ಅತಿಮಾನುಷ ಕತೆಗಳನ್ನು ಹೇಳುತ್ತಿದ್ದ. ದೆವ್ವ ಭೂತಗಳು ನಿಜವಾಗಿಯೂ ಬದುಕಿರುವುದು ನಮಗೆಲ್ಲಾ ತಿಳಿದದ್ದೇ ಕಿಟ್ಟಜ್ಜನಿಂದ. ಅಪ್ಸರೆಯರು ಬೇಜಾರಾದಾಗ ಸ್ನಾನ ಮಾಡಲು ಭೂಲೋಕಕ್ಕೆ ಬರುವುದು, ಕೊರಳ ಸರ ಮರೆತು ಹೋಗುವುದು, ನರಲೋಕದ ಹುಡುಗ ಅವರ ಬೆನ್ನು ಹತ್ತಿ ಮದ್ವೆಯಾಗುವುದು ಇಂಥವೇ ರೋಚಕ ಕಥೆಗಳನ್ನು ಆತ ಹೇಳುತ್ತಿದ್ದ.

"ಮತ್ತೆ ಲಂಟಾನದ ಪೊದೇಲಿ ಆನಾಡಿ ಮೊಟ್ಟೆ ಕೆಂದಹ್ಯಾಟೆ ಇಕ್ಕಿತಲ್ಲ. ಆ ವಿಸಿಯ ನಾಗ್ರಾಜಂಗೆ ಯಾಕೆ ತಿಳೀಲಿಲ್ಲ ಕಿಟ್ಟಜ್ಜ" ಎಂದು ಕೇಳಿದಾಗ "ನೀವು ಲೌಡಿಗಂಡ್ರು ಬೆಳಿಗ್ಗೆ ಎದ್ದೇಟಿಗೆ ಉಚ್ಚೆ ಹೊಯ್ಯಾಕೆ ಆ ಬೇಲಿ ತಾವು ಹೋಗೋದಲ್ವೆ? ಆ ಪಾಟಿ ಗಬ್ಬಾಥದ ಗಂಜಲ ಸುರುವಿದ್ರೆ ಇನ್ನಾವ ಹಾದರಗಿತ್ತಿ ಹಾವು ಬಂದೀತಪ್ಪ. ಅಪ್ಪಿತಪ್ಪೀ ಬಂದ್ರೆ ತಲೆ ತಿರುಗಿ, ನರ ಸೇದ್ಹೋಗಿ ಗೊಟಕ್ ಅನ್ನಲ್ವೆ" ಎನ್ನುತ್ತಿದ್ದನು.

ವಿಷದ ಹಾವನ್ನೇ ಮಣಿಸಬಲ್ಲ ಶಕ್ತಿ ನಮ್ಮ ಮೂತ್ರಕ್ಕಿರುವುದು ಕೇಳಿ ನಮಗೆಲ್ಲಾ ಬಹಳ ಹೆಮ್ಮೆ ಎನಿಸಿತು. ಬರೀ ಮನೆ ಹಿಂಬದಿಯ ಗೋಡೆಗೆ ರಂಧ್ರ ಕೊರೆಯಲು ಮಾತ್ರ ಬಳಸುತ್ತಿದ್ದ ನಮ್ಮ ಮೂತ್ರಶಕ್ತಿಯನ್ನು ಹಾವಿಗೆ ದಿಗ್ಬಂಧನ ಹಾಕುವ ಸದುದ್ದೇಶದಿಂದ ಬೇಲಿಯ ಕಡೆಗೂ ವಿಸ್ತರಿಸಿದೆವು. ಇದರಿಂದ ಹಾವಿಗೆ ತೊಂದರೆಯಾಯಿತೋ ಇಲ್ಲವೋ ಗೊತ್ತಿಲ್ಲ. ಬೇಲಿ ಬದಿಗೆ ಹಾಕಿದ್ದ ಹೀರೆಕಾಯಿ ಹಾಗೂ ಹಾಗಲಕಾಯಿ ಬಳ್ಳಿಗಳು ಮಾತ್ರ ಫಲ ಕೊಡುವ ಮೊದಲೇ ರೀಸಸ್ ಘಾಟಿಗೆ ಬಾಡಿ ಸುಟ್ಟೇ ಹೋದವು.

ಅತ್ತೆ ಕಡೆಯಿಂದ ಉಗಿಸಿಕೊಳ್ಳುವಂತೆ ಮಾಡಿದ ಆ ಬಾತಿನ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ನಾನಾಗಲೇ ನಿರ್ಧರಿಸಿಯಾಗಿತ್ತು. ದ್ವೇಷವನ್ನು ಗಟ್ಟಿಮಾಡಿಕೊಂಡು